ಅಸಲು ದಾವೆ ನಂಃ 574/2023 ಪಿ.ಡಬ್ಲ್ಯೂ1-ಭೂಶಯ್ಯ ತಂದೆ ಸೈದುಲ್ಲು ಕೊಯ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 24/09/2025 ರಂದು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ. LNB ವಕೀಲರಿಂದಃ**

ನಾನು ಈ ದಾವೆಯಲ್ಲಿ ವಾದಿ ಇರುತ್ತೇನೆ. ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮುಖಾಂತರ ಸಲ್ಲಿಸಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ನನಗೆ ತಿಳಿದ ಮಾಹಿತಿಯಂತೆ ಸತ್ಯವಾಗಿರುತ್ತವೆ. ಪ್ರಮಾಣ ಪತ್ರವನ್ನು ನಾನು ನೀಡಿದ ಮಾಹಿತಿ ಮೇರೆಗೆ ತಯಾರಿಸಲಾಗಿರುತ್ತದೆ. ಪ್ರಮಾಣ ಪತ್ರವನ್ನು ನನಗೆ ಓದಿ ಹೇಳಲಾಗಿದ್ದು, ಅದನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನಾನು ಕೆಲವೊಂದು ದಾಖಲೆಗಳನ್ನು ನ್ಯಾಯಾಲಯದ ಮುಂದೆ ಈ ದಿನ ಹಾಜರು ಮಾಡುತ್ತಿದ್ದೇನೆ. ಅವುಗಳನ್ನು ನನ್ನ ಪರವಾಗಿ ನಿಶಾನೆಯಾಗಿ ಗುರತಿಸಬೇಕಾಗಿ ಪ್ರಾರ್ಥನೆ .

ವಾದಿಯ ದಾಖಲೆಗಳನ್ನು ಈ ಕೆಳಕಂಡತೆ ನಿಶಾನೆಗಳಾಗಿ ಗುರುತಿಸಲಾಯಿತು.

| | |
|---|---|
| ನಿಪಿಃ 1 | ದಿನಾಂಕಃ 29/01/2025 ರಂದು ಸಾಲದ ಅರ್ಜಿ |
| ನಿಪಿಃ 2 | ಪ್ರತಿವಾದಿಯವರ ಕರಾರು ಪತ್ರ |
| ನಿಪಿಃ 3 | ಜಾಮೀನುದಾರರು ಬರೆದುಕೊಟ್ಟ ಕರಾರು ಪತ್ರ |
| ನಿಪಿಃ 4 | ಹಣ ಮುಟ್ಟಿದ ಬಗ್ಗೆ ರಸೀದಿ |
| ನಿಪಿಃ 5 ಮತ್ತು 6 | ಪ್ರತಿವಾದಿಗಳು ಬರೆದುಕೊಟ್ಟ ಎರಡು ಸಾಲದ ತಿರುವಳಿ ಪತ್ರ |
| ನಿಪಿಃ 7 | ದಿಃ 25/10/2022 ರಂದು ವಕೀಲರು ನೀಡಿದ ಕಾನೂನು ತಿಳುವಳಿಕೆ ಪತ್ರ |
| ನಿಪಿಃ 8 ಮತ್ತು 9 | ಎರಡು ಅಂಚೆ ರಸೀದಿಗಳು |
| ನಿಪಿಃ 10 | ಪ್ರತಿವಾದಿ ಖಾತೆಯ ತಖ್ತೆ |
| ನಿಪಿಃ 11 | ಪತ್ರಿಕಾ ಪ್ರಕಟನೆ |

ನನ್ನ ದಾವೆಯನ್ನು ಡಿಕ್ರಿ ಮಾಡಬೇಕೆಂದು ಮಾನ್ಯ ನ್ಯಾಯಾಲಯಕ್ಕೆ ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ-ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ವಿಜಯಕುಮಾರ ಎನ್)**

ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.